**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಎಸ್.ಸಿ.148/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ ಕೆ. ಎನ್. |
| ತಂದೆಯ/ಗಂಡನ ಹೆಸರು | : | ಸುದರ್ಶನ ಕೆ. ಎಂ. |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಹೋಟೆಲ್ ಕೆಲಸ |
| ವಾಸ ಸ್ಥಳ | : | ನಿಟ್ಟುವಳ್ಳಿ ದಾವಣಗೆರೆ |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 07-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಸಿದ್ದಪ್ಪ ನನ್ನ ದೊಡ್ಡಪ್ಪ. ಭಾರತಮ್ಮ ನನ್ನ ದೊಡ್ಡಮ್ಮ. ಅವರ ಮಗ ಕಿರಣ ಕುಮಾರ. ಕಿರಣ ಕುಮಾರವರ ಹೆಂಡತಿಯ ಹೆಸರು ಪೂಜಾ. ಕಿರಣ ಕುಮಾರ ಮತ್ತು ಪೂಜಾರವರಿಗೆ ಎರಡು ಗಂಡು ಮಕ್ಕಳು ಸೃಜನ್ ಮತ್ತು ಸುಪ್ರೀತ್. ಕಿರಣ ಕುಮಾರ ಮತ್ತು ಸೃಜನ್ ರವರು ತೀರಿಕೊಂಡಿದ್ದಾರೆ. 2020 ರಲ್ಲಿ ಲಾಕ್ ಡೌನ್ ಕಾಲಕ್ಕೆ ಕಿರಣ ಕುಮಾರ ಮತ್ತು ಸೃಜನ್ ರವರು ದೊಡ್ಡಮ್ಮರಾದ ಭಾರತಮ್ಮರವರ ಶಂಕರನಹಳ್ಳಿ ಗ್ರಾಮಕ್ಕೆ ಹೋಗಿದ್ದರು. ಅವರ ಮನೆಗೆ ದಿಃ 25-05-2020 ಕ್ಕಿಂತಿ ಒಂದು ವಾರದ ಮುಂಚೆ ಹೋಗಿದ್ದರು. ದಿಃ25-05-2020 ಬೆಳಿಗ್ಗೆ 10.00 ಗಂಟೆಗೆ ಶಂಕರನಹಳ್ಳಿಯಲ್ಲಿ ಒಂದು ಕಲ್ಲು ಕ್ವಾರಿ ಇದ್ದು ಅಲ್ಲಿ ಇಬ್ಬರು ಬಹಿರದೆಸೆಗೆ ಹೋದಾಗ ನೀರಿನ ಮುಟ್ಟಲು ಹೋದಾಗ ಬಿದ್ದು ತೀರಿಕೊಂಡರು. ಆ ಕಲ್ಲು ಕ್ವಾರಿ ಊರಿನ ಸಮೀಪದಲ್ಲೇ ಅಂದರೆ ಬಾಡಾ ಮತ್ತು ಮಾಯಕೊಂಡ ರಸ್ತೆಯ ಬದಿಯಲ್ಲಿ ಇತ್ತು. ಈ ಎಲ್ಲಾ ವಿಷಯವನ್ನು ನನ್ನ ಮಾವ ಸಣ್ಣಸ್ವಾಮಿಯವರು ಫೋನ್ ಮಾಡಿ

10.00-11.00 ಗಂಟೆ ಸಮಯದಲ್ಲಿ ತಿಳಿಸಿದರು. ಕೂಡಲೇ ನಾನು ಮತ್ತು ನಮ್ಮ ಸಂಬಂಧಿಕರು ಆ ಸ್ಥಳಕ್ಕೆ ಹೋಗಿ ಪೂಜಾರವರನ್ನು ವಿಚಾರಿಸಿದೆವು. ಆಗ ಅವರು ಕಿರಣ ಕುಮಾರ ಮತ್ತು ಸೃಜನ್ ರವರು ಅಲ್ಲಿ ಬಿದ್ದಿರುವ ವಿಚಾರ ತಿಳಿಸಿದರು. ನೀರು ಮುಟ್ಟಲು ಹೋಗಿ ಬಿದ್ದು ಸಾವನ್ನಪ್ಪಿದರು ಅಂತ ಹೇಳಿದರು. ಅದು ನಿಷೇಧಿತ ಪ್ರದೇಶ ಇದ್ದು, ಮಾಲೀಕರ ನಿರ್ಲಕ್ಷತನದಿಂದ ಅವರಿಬ್ಬರ ಸಾವು ಉಂಟಾಗಿರುತ್ತದೆ. ಆ ಕಲ್ಲು ಕ್ವಾರಿ ಮೊದಲಿಗೆ ಜಯಪ್ಪರವರು ನಡೆಸುತ್ತಾ ಇದ್ದರು ನಂತರ ಅವರ ಮಗ ಹೇಮರಾಜರವರು ನಡೆಸುತ್ತಾ ಇದ್ದರು. ಆ ಕಲ್ಲು ಕ್ವಾರಿ ಹೇಮರಾಜರವರ ತಾಯಿಯಾದ ಲಲಿತಮ್ಮರವರ ಹೆಸರಿನಲ್ಲಿತ್ತು. ಅದು ಸರ್ವೆ ನಂ.25/3 ರಲ್ಲಿ ಇತ್ತು. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ ಆ ಕಲ್ಲು ಕ್ವಾರಿ ಮಾಡಬಾರದು ಅಂತ ಆದೇಶ ಇತ್ತು. ಆ ಆದೇಶವನ್ನು ಪಾಲಿಸದೇ ಒಂದು ನಾಮ ಫಲಕ ಧರಿಸರಲಿಲ್ಲ, ಬೇಲಿ ಹಾಕಿರಲಿಲ್ಲ. ಆ ಕಲ್ಲು ಕ್ವಾರಿನಲ್ಲಿ ಗುಂಡಿ ತೆಗೆದು ದೊಡ್ಡ ಕಲ್ಲು ಇದ್ದು ಅಕ್ರಮವಾಗಿ ಗಣಿಗಾರಿಕೆ ನಡೆದಿತ್ತು, ಗುಂಡಿಗಳಲ್ಲಿ ನೀರು ತುಂಬಿತ್ತು, ಅಲ್ಲಿ ಹಲವಾರು ದನಕರುಗಳು ಸಹಿ ತೀರಿಕೊಂಡಿದ್ದವು. ಆದ್ದರಿಂದ ಹೇಮರಾಜರವರ ಮೇಲೆ ದೂರು ಕೊಡಲಾಯಿತು. ಆ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಅಂತ, ನನ್ನ ಸಹಿಯನ್ನು ನಿಪಿ-1(ಎ) ಅಂತ ಗುರುತಿಸುತ್ತೇನೆ.

2. ದಿಃ 25-05-2020 ರಂದು ಮೊದಲಿಗೆ ಸೃಜನ್ ರವರ ಮೃತ ದೇಹ ಸಿಕ್ಕಿತ್ತು. ಅಗ್ನಿ ಇಲಾಖೆಯ ಅಧಿಕಾರಿಯವರು ಬಂದು ಮೃತ ಸೃಜನ್ ರವರ ಶವವನ್ನು ತೆಗೆದರು. ಸೃಜನ್ ರವರ ಶವದ ಪೋಟೋವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಅಂತ ಗುರುತಿಸುತ್ತೇನೆ. ನಿಪಿ-2 ರ ಪೋಟೋದಲ್ಲಿ ನಾನು ಇದ್ದೇನೆ. ಮಾರನೇ ದಿನ ದಿಃ 26-05-2020 ರಂದು ಕಿರಣ ಕುಮಾರರವರ ಮೃತ ದೇಹ ಸಿಕ್ಕಿತ್ತು. ಅಗ್ನಿ ಇಲಾಖೆಯ ಅಧಿಕಾರಿಯವರು ಬಂದು ಮೃತ ಸೃಜನ್ ರವರ ಶವವನ್ನು ತೆಗೆದರು. ಕಿರಣ ಕುಮಾರರವರ ಶವದ ಪೋಟೋವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಅಂತ ಗುರುತಿಸುತ್ತೇನೆ. ನಿಪಿ-3 ರ ಪೋಟೋದಲ್ಲಿ ನಾನು ಇದ್ದೇನೆ.

3. ಪೊಲೀಸರು ದಿಃ 26-05-2020 ರಂದು ಮಹಜರ ಮಾಡಲು ಸ್ಥಳಕ್ಕೆ ಬಂದಿದ್ದರು. ಆ ಸ್ಥಳದ ಜಾಗವನ್ನು ನಾನೇ ಪೊಲೀಸರಿಗೆ ತೋರಿಸಿದ್ದೇನೆ. ಅಲ್ಲಿ ಪೊಲೀಸರು ಮಧ್ಯಾಹ್ನ 12.00 ರಿಂದ 1.00 ಗಂಟೆಯವರೆಗೆ ಮಹಜರ ಮಾಡಿದರು. ಆ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-4 ಅಂತ, ನನ್ನ ಸಹಿಯನ್ನು ನಿಪಿ-4(ಎ) ಅಂತ ಗುರುತಿಸುತ್ತೇನೆ. ಮಹಜರ ಸಮಯದಲ್ಲಿ ನಾನು ಈಗ ನೋಡಿದ ಪೋಟೋ ತೆಗೆದಿದ್ದಾರೆ. ಈ ಪೋಟೋವನ್ನು ನಿಪಿ-5 ಅಂತ ಗುರುತಿಸುತ್ತೇನೆ. ಮಹಜರನ್ನು

ಚಾಸಾ-2 ಮತ್ತು 3 ರವರ ಸಮಕ್ಷಮ ಮಾಡಿರುತ್ತಾರೆ. ಹೇಮರಾಜರವರು ಈಗ ನ್ಯಾಯಾಲಯದಲ್ಲಿ ಹಾಜರಿದ್ದು ಅವರನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಇ.ಎಫ್., ವಕೀಲರಿಂದ ಆರೋಪಿತರ ಪರವಾಗಿ**:

4. ಮೇ -2020 ರಲ್ಲಿ ಕರ್ಫ್ಯೂ ಇತ್ತು ಅಂದರೆ ಬೆಳಿಗ್ಗೆ 6.00 ರಿಂದ 10.00 ಗಂಟೆಯವರೆಗೆ ಆಚೆ ಹೋಗಬಹುದಿತ್ತು. ದೂರಿನಲ್ಲಿ ನಾನು ಘಟನೆಯಾಗುವ ಸಮಯದಲ್ಲಿ ಕೋವಿಡ್ ನಿಂದ ಲಾಕ್ ಡೌನ್ ಇದ್ದು ಮತ್ತು ಹೊರಗೆ ಹೋಗುವುದರ ಸಮಯದ ಬಗ್ಗೆ ದೂರಿನಲ್ಲಿ ಬರೆದಿಲ್ಲ. ಸರ್ವೇ ನಂಬರ 25/3 ಲಲಿತಮ್ಮರವರ ಹೆಸರಿನಲ್ಲಿರುವುದಾಗಿ ನಾನೇ ದಾಖಲೆ ನೋಡಿಲ್ಲ ಮತ್ತು ಅದನ್ನು ದೂರಿನಲ್ಲಿ ಬರೆಸಿರುವುದಿಲ್ಲ. ಲಲಿತಮ್ಮರವರ ಹೆಸರಿನಲ್ಲಿರುವ ಜಮೀನು ಅಂತ ಅಲ್ಲಿ ಸ್ಥಳೀಯರಿಂದ ಕೇಳಿ ನನಗೆ ಗೊತ್ತಿದೆ. ಆ ಸ್ಥಳೀಯರು ಅಂದರೆ ಎಸ್.ಎಂ. ಪ್ರಭಾಕರ್ ಇರುತ್ತಾರೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಬಹಳ ಜನ ಕೂಡಿದ್ದರು. ದೂರಿನಲ್ಲಿ ನಾನು ಅನಬೇರ ಗ್ರಾಮದ ವಾಸಿ ಜಯಪ್ಪ ಎಂಬುವವರ ಹೆಸರಿನಲ್ಲಿ ಕ್ವಾರಿ ಇತ್ತು ಅಂತ ಬರೆಸಿದ್ದೇನೆ. ಎಸ್.ಎಂ. ಪ್ರಭಾಕರ್ ರವರು ಕಲ್ಲು ಕ್ವಾರಿ ಮಾಲೀಕರ ಬಗ್ಗೆ ನನಗೆ ತಿಳಿಸಿದ್ದರು. ಕಲ್ಲು ಕ್ವಾರಿ ಬಗ್ಗೆ ನಾನು ದಾಖಲೆ ನೋಡಿಲ್ಲ. ಆ ಕಲ್ಲು ಕ್ವಾರಿಯನ್ನು ಮೊದಲು ಜಯಪ್ಪರವರ ನಡೆಸುತ್ತಿದ್ದರು ಅವರ ತೀರಿಕೊಂಡ ನಂತರ ಹೇಮರಾಜರವರ ನಡೆಸುತ್ತಿದ್ದರು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಕಲ್ಲು ಕ್ವಾರಿಯನ್ನು ಸುಮಾರು 10-12 ವರ್ಷಗಳಿಂದ ಅಕ್ರಮವಾಗಿ ಹೇಮರಾಜರವರು ನಡೆಸುತ್ತಿದ್ದಾರೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ದಾಖಲೆಯನ್ನು ನೋಡಿದ್ದೀರಾ ಅಂದರೆ ಸ್ಥಳೀಕರು ಈ ವಿಷಯವನ್ನು ನನಗೆ ಹೇಳಿದ್ದರು. ಆ ಸ್ಥಳೀಕರು ಅಂದರೆ ಪ್ರಭಾಕರ್ ಮತ್ತು ಇತರರು. ಅಲ್ಲಿ ಇದ್ದಂತಹ ಜನರು ಹಲವಾರು ಜಾನುವಾರು ನೀರು ಕುಡಿಯಲು ಹೋಗಿ ಮೃತಪಟ್ಟಿದ್ದವು ಅಂತ ತಿಳಿಸಿದರು. ದೂರು ಕೊಡುವ ಪೂರ್ವದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಬಗ್ಗೆ ಮತ್ತು ಜಾನುವಾರು ನೀರು ಕುಡಿಯಲು ಹೋಗಿ ಮೃತಪಟ್ಟಿದ್ದ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ. ಹೇಮರಾಜರವರು ನಾನು ಹೇಳಿದ ರೀತಿಯಲ್ಲಿ ಸರ್ವೇ ನಂಬರ 25/3 ರಲ್ಲಿ ಗಣಿಗಾರಿಕೆ ಮಾಡುತ್ತಿರಲಿಲ್ಲ ಅಂದರೆ ಸುಳ್ಳು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. ಆ ಸ್ಥಳಕ್ಕೆ ನಾನು ಹೋಗುವ ಪೂರ್ವದಲ್ಲಿ ಕೂಡಿದಂತಹ ಜನರ ಹೆಸರು ನನಗೆ ಹೇಳಲು ಬರುವುದಿಲ್ಲ.

5. ನಾನು ಹೇಳಿದ ಆಧಾರದ ಮೇಲೆ ನಿಪಿ-4 ರ ಮಹಜರನ್ನು ಬರೆಯಲಾಯಿತು. ನಾನು ಹೋಗುವ ಪೂರ್ವದಲ್ಲಿ ಅಲ್ಲಿ ಜನರು ಸೇರಿಕೊಂಡಿರುವುದರಿಂದ ಆ ಜನರು ಸ್ಥಳವನ್ನು

ತೋರಿಸಬೇಕಾಗಿತ್ತು ಮತ್ತು ನಾನು ಆ ಸ್ಥಳವನ್ನು ತೋರಿಸಿರುವುದಿಲ್ಲ ಅಂದರೆ ಸುಳ್ಳು. ಸರ್ವೇ ನಂಬರ 25/3 ರಲ್ಲಿ ಯಾವುದೇ ಗಣಿಗಾರಿಕೆ ನಡೆಯುತ್ತಿರಲಿಲ್ಲ ಮತ್ತು ಅಲ್ಲಿ ಯಾವುದೇ ಕಲ್ಲು ಕ್ವಾರಿ ಇರಲಿಲ್ಲ ಅಂದರೆ ಸುಳ್ಳು. ಬೇರೆ ಸರ್ವೇ ನಂಬರನಲ್ಲಿ ಭಾವಿ ಇತ್ತು ಅಂದರೆ ನನಗೆ ಹೇಗೆ ಗೊತ್ತಾಗಬೇಕು. ನಾನು ಸರ್ವೇ ನಂಬರನ್ನು ಪರಿಶೀಲನೆ ಮಾಡದೇ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕಲ್ಲುಗಾರಿಕೆ ಪಕ್ಕದಲ್ಲಿ ಆರೋಪಿಯ ತೋಟ ಇದೆ. ಆ ತೋಟ ಸರ್ವೇ ನಂಬರ ಅಂದರೆ 25/3. ಅಲ್ಲಿ ಬಂದು ಮಹಜರ ಮಾಡಿದ್ದು ಮತ್ತು ನಾನು ಸ್ಥಳ ತೋರಿಸಿದ್ದು ಸುಳ್ಳು ಅಂದರೆ ಸರಿಯಲ್ಲ. ಮಹಜರನಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಅಂದರೆ ಸುಳ್ಳು. ಪೊಲೀಸರು ಮಹಜರನ್ನು ಠಾಣೆಯಲ್ಲೇ ತಯಾರಿಸಿರುತ್ತಾರೆ ಅಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಮಹಜರ ಮಾಡಿಲ್ಲ, ಪೋಟೋ ಮಾತ್ರ ತೆಗೆದಿದ್ದಾರೆ ಅಂದರೆ ಸುಳ್ಳು. ಸಾಕ್ಷಿದಾರರು ಹೇಳುತ್ತಾರೆ ನನ್ನ ಸಮಕ್ಷಮ ಪೊಲೀಸರು ಮಹಜರ ಮಾಡಿದ್ದಾರೆ. ಕಿರಣ ಕುಮಾರ ಮತ್ತು ಸೃಜನ್ ರವರ ಮರಣಕ್ಕೆ ಆರೋಪಿ ಕಾರಣ ಅಲ್ಲ ಮತ್ತು ಆರೋಪಿಯ ನಿರ್ಲಕ್ಷತನ ಕಾರಣ ಅಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.